## ಮಾನ್ಯ ಸಿವಿಲ್ ನ್ಯಾಯಾಧೀಶರು ವ ಜೆ ಎಂ ಎಫ್‌ಸಿ ಮುದ್ದೇಬಿಹಾಳ, ಇವರ ನ್ಯಾಯಾಲಯ

ಸಿ ಸಿ ನಂಃ 702/2017
ಸಿಡಬ್ಲೂ-12
ಪಿ.ಡಬ್ಲ್ಯೂ-10

ಸಾಕ್ಷಿದಾರನ ಹೆಸರು ಃ ಹಣಮಂತ್ರಾಯ ಬಸರೀಕಟ್ಟಿ

ತಂದೆ ಹೆಸರು ಃ ಯಮನಪ್ಪ

ವಯಸ್ಸು ಃ 44 ವರ್ಷ,

ಉದ್ಯೋಗ : ಸರ್ಕಾರಿ ನೌಕರ

ವಾಸಸ್ಥಳ ಃ ತುಂಬಗಿ

(ದಿಃ 26.02.2024 ರಂದು ಸಾಕ್ಷಿಯನ್ನು ಕರೆಸಿ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು)

### ಮುಖ್ಯ ವಿಚಾರಣೆ ಸ ಸ ಅ ಅವರಿಂದ

ಮೃತ ಭೀಮಪ್ಪ ಇವರು ನನಗೆ ಸಂಬಂಧಿಕನಾಗಬೇಕು. ದಿಃ 16.7.2017 ರಂದು ಬೀಮಪ್ಪ ಈತನು ರಸ್ತೆ ಅಪಘಾತದಲ್ಲಿ ತೀರಿಹೋಗಿರುವ ವಿಷಯ ನನಗೆ ಗೊತ್ತಾಗಿದ್ದು, ನಾನು ಭೀಮಪ್ಪ ಈತನನ್ನು ನೋಡಲು ತಾಳಿಕೋಟಿ ಸರ್ಕಾರಿ ಆಸ್ಪತ್ರೆಗೆ ಹೋದಾಗ, ಮೃತ ಭೀಮಪ್ಪನವರ ಮಗನಾದ ಚಾಸಾ 1 ಈತನು ಪಿರ್ಯಾದಿಯನ್ನು ಬರೆಯಲು ನನಗೆ ಹೇಳಿದ್ದು, ನಾನು ಚಾಸಾ 1 ರವರು ಹೇಳಿದ ಪ್ರಕಾರ ಯಥಾವತ್ತಾಗಿ ದೂರನ್ನು ಬರೆದಿರುತ್ತೇನೆ. ಇದನ್ನು ಹೊರತುಪಡಿಸಿ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಸಂಭವಿಸಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ಈ ಕುರಿತು ನಾನು ಪೋಲಿಸರಿಗೆ ಹೇಳಿಕೆ ಕೊಟ್ಟಿರುವುದಿಲ್ಲ.

ಸಾಕ್ಷಿಯ ನಿಪಿ 1 ರಲ್ಲಿರುವ ತನ್ನ ಸಹಿಯನ್ನು ನೋಡಿ ಗುರ್ತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರ್ತಿಸಲಾಯಿತು.

(ಈ ಹಂತದಲ್ಲಿ ಸ ಸ ಅ ಅವರು ಸಾಕ್ಷಿಯನ್ನು ಪ್ರತೀಕೂಲ ಸಾಕ್ಷಿ ಅಂತಾ ಪರಿಗಣಿಸಿ ಅನುಮತಿ ಕೋರಿದ್ದರಿಂದ ಅನುಮತಿ ನೀಡಲಾಯಿತು)

**<u>ಪಾಟೀ ಸವಾಲುಃ ಸ ಸ ಅ ಅವರಿಂದ</u>**

ನಾನು ದಿಃ 16.7.2017 ರಂದು ಚಾಸಾ 1 ರವರನ್ನು ವಿಚಾರಿಸಲಾಗಿ, ಅವರು ಆತನ ತಂದೆ ಗುಂಡಕನಾಳ ಗ್ರಾಮಕ್ಕೆ ಜಾತ್ರೆಗೆ ಹೋಗಿದ್ದು, ಬಸವನ ಕಟ್ಟೆ ಹತ್ತಿರ ಸೈದಪ್ಪನ ಮುತ್ಯಾನ ಗುಡಿಗೆ ಹೋಗಿ ಮನೆಯ ಕಡೆಗೆ ನಡೆದುಕೊಂಡು ಹೋಗುವಾಗ ಆರೋಪಿತನ ಜೀಪ ನಂಃ ಕೆಎ 28 ಎ 0615 ನ್ನು ಅತೀ ಜೋರಾಗಿ ಮತ್ತು ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ರಿವರ್ಸ ನಡೆಸಿಕೊಂಡು ಹೋಗಿ ನನ್ನ ತಂದೆಗೆ ಡಿಕ್ಕಿ ಪಡಿಸಿ ಭಾರಿಗಾಯ ಪೆಟ್ಟು ಮಾಡಿ, ಜೀಪ ಬಿಟ್ಟು ಓಡಿ ಹೋದನು ಅಂತಾ ತಿಳಿಸಿರುತ್ತಾರೆ ಎಂದರೆ ಸರಿಯಲ್ಲ. ಅಪಘಾತಪಡಿಸಿದ ವಾಹನದ ಚಾಲಕನ ಹೆಸರು ರಂಜಾನಸಾಬ ಅಬ್ಬುಸಾ ಮಕಾನದಾರ ಅಂತಾ ನನಗೆ ಗೊತ್ತಾಯಿತು ಎಂದರೆ ಸರಿಯಲ್ಲ. ಸದರಿ ಅಪಘಾತ ಆರೋಪಿತನ ತಪ್ಪಿನಿಂದ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ನಾನು ಈ ಕುರಿತು ಪೋಲಿಸರಿಗೆ ಹೇಳಿಕೆ ಮತ್ತು ಪುನರ್ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಹೇಳಿಕೆ ಮತ್ತು ಪುನರ ಹೇಳಿಕೆಗೆ ವ್ಯತಿರಿಕ್ತವಾಗಿ ನುಡಿದಿದ್ದರಿಂದ ಸಾಕ್ಷಿಯ ಹೇಳಿಕೆಯನ್ನು ನಿಪಿ 8 ಎಂದು ಪುನರ್ ಹೇಳಿಕೆಯನ್ನು ನಿಪಿ 9 ಎಂದು ಗುರ್ತಿಸಲಾಯಿತು. ನಿಪಿ 8 ಮತ್ತು 9 ರಂತೆ ಹೇಳಿಕೆ ಮತ್ತು ಪುನರ್ ಹೇಳಿಕೆ ನೀಡಿದ್ದರೂ ಸಹಿತ ಆರೋಪಿತನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟಿ ಸವಾಲುಃ  ಆರೋಪಿ ಪರವಾಗಿ ಶ್ರೀ ಆರ್ ವಾಯ್ ಎನ್ ವಕೀಲರು ಪಾಟೀ ಸವಾಲು ಇಲ್ಲ ಅಂತಾ ತಿಳಿಸಿರುತ್ತಾರೆ.</u>

ಮರು ವಿಚಾರಣೆಇಲ್ಲ.

ಓ ಹೇ ಕೇ ಸರಿ ಅದೆ.

ನ್ಯಾದಂ ಪ್ರ ವರ್ಗ, ಮುದ್ದೇಬಿಹಾಳ.